(ರೂ. 20 ಛಾಪಾ ಕಾಗದದಲ್ಲಿ)

# ಮುಚ್ಚಳಿಕೆ ಪತ್ರ

____________________ ಜಿಲ್ಲೆ _______________________________ ತಾಲ್ಲೂಕು
_______________________________________ಗ್ರಾಮ/ಪಟ್ಟಣದಲ್ಲಿ ವಾಸವಾಗಿರುವ
ಶ್ರೀಮತಿ/ಶ್ರೀ _______________________________________________ ಇವರ
ಮಗ/ಮಗಳು ___________________________________________________ ಆದ
ನಾನು ದಿನಾಂಕ: _________________ ರಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರ.

ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2023–24ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಎಚ್.ಡಿ. ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುವ ಮಾಸಿಕ ವ್ಯಾಸಂಗ ವೇತನ/ ಫೆಲೋಶಿಪ್‌ಗೆ 2023–24ನೇ ಸಾಲಿನಲ್ಲಿ ಅರ್ಜಿ ಸಲ್ಲಿಸುತ್ತಿರುವ ನಾನು ಮಾಸಿಕ ವ್ಯಾಸಂಗ ವೇತನ/ ಫೆಲೋಶಿಪ್ ಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಪೂರ್ಣವಾಗಿ ಓದಿ ತಿಳಿದುಕೊಂಡಿದ್ದು, ಸದರಿ ವ್ಯಾಸಂಗ ವೇತನ/ಫೆಲೋಶಿಪ್‌ಗೆ ಆಯ್ಕೆಯಾದಲ್ಲಿ, ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ವಿಧಿಸುವ ಎಲ್ಲಾ ನಿಯಮಗಳನ್ನು ಪಾಲಿಸುತ್ತೇನೆ. ನಾನು ಇಲಾಖೆಗೆ ತಪ್ಪು ಮಾಹಿತಿ ನೀಡಿ ವ್ಯಾಸಂಗ ವೇತನ/ಫೆಲೋಶಿಪ್ ಪಡೆದಲ್ಲಿ ಅಥವಾ ನಾನು ಪಿಎಚ್.ಡಿ.ಅಧ್ಯಯನವನ್ನು ಪೂರ್ಣಗೊಳಿಸದೇ ಮಧ್ಯದಲ್ಲೇ ಬಿಟ್ಟಲ್ಲಿ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯ/ಸಂಸ್ಥೆಯ ಫೆಲೋಶಿಪ್ ಗೆ ಆಯ್ಕೆ ಬಯಸಿದಲ್ಲಿ ನನ್ನ ಪಿಎಚ್.ಡಿ. ಅಧ್ಯಯನಕ್ಕಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನನಗೆ ನೀಡಿರುವ ವ್ಯಾಸಂಗ ವೇತನ/ಫೆಲೋಶಿಪ್ ಅನ್ನು, ಸರ್ಕಾರವು ನಿಗದಿಪಡಿಸುವ ಬಡ್ಡಿಯೊಂದಿಗೆ ಮರುಪಾವತಿಸಲು ನಾನು ಮತ್ತು ನನ್ನ ತಂದೆ/ತಾಯಿ/ಪೋಷಕರು ಬದ್ಧವಾಗಿರುತ್ತೇವೆ. ಒಂದು ವೇಳೆ ನಾವು ಸರ್ಕಾರಕ್ಕೆ ಸದರಿ ವೆಚ್ಚವನ್ನು ಹಿಂದಿರುಗಿಸದೇ ಇದ್ದಲ್ಲಿ, ರಾಜ್ಯ ಸರ್ಕಾರವು ಇದನ್ನು ಭೂ ಕಂದಾಯ ಬಾಕಿ ಎಂಬುದಾಗಿ ಪರಿಗಣಿಸಿ, ನಮ್ಮಿಂದ ವಸೂಲಿ ಮಾಡಲು ಹಾಗೂ ಕಾನೂನಿನ ರೀತ್ಯ ನಮ್ಮ ವಿರುದ್ಧ ಕ್ರಮ ಜರುಗಿಸಬಹುದಾಗಿದೆ.

ಪಿಎಚ್.ಡಿ ವ್ಯಾಸಂಗ ವೇತನ/ಫೆಲೋಶಿಪ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ನಿಬಂಧನೆಗಳನ್ನು ಒಪ್ಪಿ, ಈ ಮುಚ್ಚಳಿಕೆ ಪತ್ರವನ್ನು ಸಲ್ಲಿಸಿರುತ್ತೇವೆ.

1. ಪಿಎಚ್.ಡಿ. ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗೆ ಆಯ್ಕೆಗೊಂಡಲ್ಲಿ, ಅರ್ಜಿಯಲ್ಲಿ ನೀಡಿರುವ ಮಾಹಿತಿಯಂತೆ ವಿಶ್ವ ವಿದ್ಯಾಲಯ/ಸಂಸ್ಥೆಯಲ್ಲಿ ವ್ಯಾಸಂಗವನ್ನು ಮಾಡುತ್ತೇನೆ ಹಾಗೂ ಅರ್ಜಿಯಲ್ಲಿ ನಮೂದಿಸಿರುವ ವ್ಯಾಸಂಗ ಮಾಡುವ ವಿಷಯವನ್ನು ಬದಲಾಯಿಸುವುದಿಲ್ಲ.
2. ನಾನು ಮಾಸಿಕ ಕನಿಷ್ಠ ಶೇ.75 ಕ್ಕಿಂತ ಕಡಿಮೆ ಹಾಜರಾತಿಯನ್ನು ಹೊಂದಿದಲ್ಲಿ, ಆ ಮಾಹೆಗೆ ವ್ಯಾಸಂಗ ವೇತನ/ಫೆಲೋಶಿಪ್ ಅನ್ನು ಇಲಾಖೆಯಿಂದ ಪಾವತಿಸಲಾಗುವುದಿಲ್ಲ ಎಂಬುದನ್ನು ತಿಳಿದಿರುತ್ತೇನೆ.
3. ನಾನು ಪಿಎಚ್.ಡಿ ಅಧ್ಯಯನವನ್ನು ಅರ್ಧದಲ್ಲಿ ಮೊಟಕುಗೊಳಿಸಿದಲ್ಲಿ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯ/ಸಂಸ್ಥೆಯ ಫೆಲೋಶಿಪ್ ಗೆ ಆಯ್ಕೆ ಬಯಸಿದಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನನಗೆ ಮಂಜೂರು ಮಾಡಿದ ಎಲ್ಲಾ ವ್ಯಾಸಂಗ ವೇತನ/ಫೆಲೋಶಿಪ್ ಮೊತ್ತವನ್ನು, ಸರ್ಕಾರವು ವಿಧಿಸುವ ಬಡ್ಡಿಯೊಂದಿಗೆ ಸರ್ಕಾರಕ್ಕೆ ಮರುಪಾವತಿಸಲು ನಾನು ಮತ್ತು ನನ್ನ ಕುಟುಂಬದವರು ಬದ್ಧವಾಗಿರುತ್ತೇವೆ.
4. ನಾನು ಬೇರೆ ಯಾವ ಮೂಲದಿಂದಲೂ ವ್ಯಾಸಂಗ ವೇತನ/ಫೆಲೋಶಿಪ್ ಅನ್ನು ಪಡೆಯುತ್ತಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

| | | |
|---|---|---|
| ಸ್ಥಳ: | ತಂದೆ/ತಾಯಿ/ಪೋಷಕರು | ಅಭ್ಯರ್ಥಿಯ ಹೆಸರು ಮತ್ತು |
| ದಿನಾಂಕ: | ಹೆಸರು ಮತ್ತು ಸಹಿ | ಸಹಿ |

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುವ ಪೂರ್ಣಾವಧಿ ಪಿಎಚ್.ಡಿ ವ್ಯಾಸಂಗ ವೇತನ/ಫೆಲೋಶಿಪ್ ಪಡೆಯಲು ಹಿಂದುಳಿದ ವರ್ಗಗಳ ಅಭ್ಯರ್ಥಿಗಳು 2023-24ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಎಚ್.ಡಿ ಅಧ್ಯಯನ ಮಾಡುತ್ತಿರುವ ಬಗ್ಗೆ ಸಂಬಂಧಿಸಿದ ಸಂಸ್ಥೆ/ಕಾಲೇಜು/ ವಿಶ್ವವಿದ್ಯಾಲಯಗಳಿಂದ ಪಡೆದು ಸಲ್ಲಿಸಬೇಕಾದ ದೃಢೀಕರಣ ಪತ್ರದ ನಮೂನೆ**

______________ ಜಿಲ್ಲೆ __________________ ತಾಲ್ಲೂಕು ________________________ಗ್ರಾಮ/ಪಟ್ಟಣದಲ್ಲಿ ವಾಸವಾಗಿರುವ ಶ್ರೀಮತಿ/ಶ್ರೀ ________________________ ಇವರ ಮಗ/ಮಗಳು ________________________ ಆದ ಶ್ರೀ/ಶ್ರೀಮತಿ/ಕು ________________________ ರವರು ____________________________ಸಂಸ್ಥೆ/ಕಾಲೇಜು/ ವಿಶ್ವವಿದ್ಯಾಲಯದಲ್ಲಿ ದಿನಾಂಕ:____________ ರಂದು ____________________ವಿಷಯದ ಬಗ್ಗೆ ಪೂರ್ಣಾವಧಿ ಪಿಎಚ್.ಡಿ.ಗಾಗಿ ನೋಂದಾಯಿಸಿಕೊಂಡಿದ್ದು, ಶ್ರೀ________________________ ರವರ ಮಾರ್ಗದರ್ಶನದಲ್ಲಿ ದಿನಾಂಕ:____________ ರಿಂದ ಅಧ್ಯಯನವನ್ನು ಪ್ರಾರಂಭಿಸಿರುತ್ತಾರೆ. ಇವರು ಪೂರ್ಣಾವಧಿ ಪಿಎಚ್.ಡಿ ಅಧ್ಯಯನಕ್ಕಾಗಿ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ/ವಿಶ್ವವಿದ್ಯಾಲಯ ಹಾಗೂ ಇತರೆ ಯಾವುದೇ ಮೂಲಗಳಿಂದ ವ್ಯಾಸಂಗ ವೇತನ/ಫೆಲೋಶಿಪ್ ಅನ್ನು ಪಡೆಯುತ್ತಿರುವುದಿಲ್ಲವೆಂದು ದೃಢೀಕರಿಸಿದೆ.

ಪಿಎಚ್.ಡಿ ರಿಜಿಸ್ಟ್ರೇಷನ್ ಸಂಖ್ಯೆ & ವರ್ಷ:____________________

ದಿನಾಂಕ: (ಸಹಿ ಮತ್ತು ಮೊಹರು)

ಸ್ಥಳ: ಪ್ರಾಂಶುಪಾಲರು/ನಿರ್ದೇಶಕರು/ರಿಜಿಸ್ಟ್ರಾರ್